# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1449**
**ಸದಸ್ಯರ ಹೆಸರು : ಶ್ರೀಮತಿ ಬಲ್ಕೀಸ್ ಬಾನು**
**(ವಿಧಾನಸಭೆಯಿಂದ ಚುನಾಯಿತರಾದವರು)**
**ಉತ್ತರಿಸುವ ದಿನಾಂಕ : 20.03.2025**
**ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ತುಂಗಾ ಅಣೆಕಟ್ಟು ಹಾಗೂ ಭದ್ರಾ ಅಣೆಕಟ್ಟು ಯೋಜನೆಗೆ ಸಂಬಂಧಿಸಿದಂತೆ ಮುಳುಗಡೆಗೊಂಡ ಎಷ್ಟು ಸಂತ್ರಸ್ಥ ಕುಟುಂಬಗಳಿಗೆ ಪರಿಹಾರ ಹಾಗೂ ಪುರ್ನವಸತಿ ಕಲ್ಪಿಸಿ ಜಮೀನು ಮಂಜೂರು ಮಾಡಲಾಗಿದೆ; | **ತುಂಗಾ ಅಣೆಕಟ್ಟನ್ನು** ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕಿನಲ್ಲಿರುವ 1946 ರಿಂದ 1956 ನಡುವೆ ನಿರ್ಮಾಣ ಮಾಡಲಾಗಿದೆ. ಇಲಾಖೆಯಲ್ಲಿ ಲಭ್ಯವಿರುವ History report (ಶ್ರೀ ದೊಡ್ಡಯ್ಯ, ರಿಸರ್ಚ್ ಆಫೀಸರ್ ರವರ ವರದಿ)ರಲ್ಲಿ ಒಟ್ಟು 14 ಗ್ರಾಮಗಳಾದ ತಿಮ್ಮಕ್ಕಾಪುರ, ಸಕ್ರೆಬೈಲ್ ಎಸ್.ಎಫ್, ಬೊಮ್ಮನಹಳ್ಳಿ, ಕಣಗಲಕೊಪ್ಪ, ಲಿಂಗಾಪುರ, ಮತ್ತಿನಕೊಪ್ಪ, ಕಣಬೂರು, ಬಿಳ್ಳಗಳ, ಸಿದ್ದಮ್ಮಜ್ಜಿ ಹೊಸೂರು, ಚಿಟ್ಟೆಮನೆ, ನಿರ್ಲೆ, ಚೋರನಹೆಡ್ಡೆಹಳ್ಳಿ, ಹಾಲ್ ಲಕ್ಕವಳ್ಳಿ ಇವುಗಳು ತುಂಗಾ ಅಣೆಕಟ್ಟೆ ಹಿನ್ನೀರಿನ ಪ್ರದೇಶದ ಬಾಧಿತವಾದ ಗ್ರಾಮಗಳು, ಇವುಗಳಲ್ಲಿ ತಿಮ್ಮಕ್ಕಾಪುರ, ಸಕ್ರೇಬೈಲು ವ್ಯಾಪ್ತಿಯ 37 ಕುಟುಂಬಳಿಗೆ ಪುನರ್ ವಸತಿಯನ್ನು ಶಿವಮೊಗ್ಗ, ಮಂಗಳೂರು ಹೆದ್ದಾರಿಯ 6/9 ಮೈಲುಗಲ್ಲು ಸಮೀಪ ಪುನರ್ ವಸತಿ ಕಲ್ಪಿಸಲಾಗಿದೆ. ಇನ್ನಿತರೆ ಗ್ರಾಮಗಳ ಬಾಧಿತ ಕುಟುಂಬಗಳಿಗೆ ಹಾಲ್ ಲಕ್ಕವಳ್ಳಿ ಸಮೀಪ 50 ನಿವೇಶನಗಳನ್ನು ಮಂಜೂರು ಮಾಡಿರುವುದಾಗಿ ಉಲ್ಲೇಖವಿರುತ್ತದೆ.<br><br>**ತುಂಗಾ ಮೇಲ್ದಂಡೆ ಯೋಜನೆಯ** ಡ್ಯಾಂನ ಹಿನ್ನೀರಿನಲ್ಲಿ ತುಂಗಾ ಅಣೆಕಟ್ಟು ಮುಳುಗಡೆಯಾಗುತ್ತಿದ್ದು, ಒಟ್ಟು 275 ಕುಟುಂಬಗಳು (148 ಮೂಲ ಕುಟುಂಬಗಳು) ಬಾಧಿತವಾಗಿದ್ದು, 175 ಕಟ್ಟಡಗಳು ಮತ್ತು 196 ನಿವೇಶನಗಳು ಬಾಧಿತವಾಗಿರುತ್ತವೆ. ಈ ಕುಟುಂಬಗಳಿಗಾಗಿ ಮಾಚೇನಹಳ್ಳಿಯಲ್ಲಿ ಪುನರ್ವಸತಿ ಕೇಂದ್ರ ನಿರ್ಮಿಸಲಾಗಿದ್ದು, ಬಡಾವಣೆಯಲ್ಲಿ 275 ನಿವೇಶನಗಳಿದ್ದು, ಎಲ್ಲಾ ಸಂತ್ರಸ್ಥರಿಗೂ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಪುನರ್ ವಸತಿ ಮತ್ತು ಪುನರ್ ನಿರ್ಮಾಣದ ಒಟ್ಟು ರೂ.20.48 ಕೋಟಿ ಪ್ಯಾಕೇಜನ್ನು ಅನುಷ್ಠಾನಗೊಳಿಸಲಾಗಿರುತ್ತದೆ.<br><br>**ಭದ್ರಾ ಅಣೆಕಟ್ಟು** (ಗೋಂದಿ ಅಣೆಕಟ್ಟು) ಅನ್ನು ಭದ್ರಾ ನದಿಗೆ ಅಡ್ಡಲಾಗಿ ಭದ್ರಾವತಿ ತಾಲ್ಲೂಕಿನ ಗೋಂದಿ ಗ್ರಾಮದ ಹತ್ತಿರ 1926ರಲ್ಲಿ ನಿರ್ಮಿಸಲಾಗಿದ್ದು, ಇದರಿಂದ ಯಾವುದೇ ಪ್ರದೇಶ ಮುಳುಗಡೆಯಾಗಿರುವುದಿಲ್ಲ.<br><br>**ಭದ್ರಾ ಜಲಾಶಯ** ಯೋಜನೆಯು 1946ರಿಂದ ಪ್ರಾರಂಭಗೊಂಡು 1962ರಲ್ಲಿ ಪೂರ್ಣಗೊಳಿಸಲಾಗಿರುತ್ತದೆ ಹಾಗೂ ಸಂತ್ರಸ್ಥ ಕುಟುಂಬಗಳಿಗೆ ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸಿರುವ ಯಾವುದೇ ಮಾಹಿತಿಯು ಲಭ್ಯವಿರುವುದಿಲ್ಲ.<br><br>**Submersion.**<br>a) Total Area — 11250.88 Ha.<br>b) Forest Area — 717.49 Ha.<br>c) Cultivable Area — 3274.65 Ha.<br>d) Falow land — 7258.74 Ha.<br>e) Number of villages submerged — 28 Nos. |
| ಆ) | ಇದಕ್ಕಾಗಿ ಅಧಿಸೂಚಿತ ಅರಣ್ಯ ಪ್ರದೇಶದಲ್ಲಿ ಎಷ್ಟು ಎಕರೆ ಜಮೀನು ಮಂಜೂರು ಮಾಡಲಾಗಿದೆ. | ತುಂಗಾ ಅಣೆಕಟ್ಟೆ ಹಾಗೂ ಭದ್ರಾ ಅಣೆಕಟ್ಟೆಗಳನ್ನು ಸ್ವತಂತ್ರ ಪೂರ್ವದಲ್ಲಿ ನಿರ್ಮಿಸಲಾಗಿದ್ದು, ಅರಣ್ಯ ಪ್ರದೇಶ ಬಿಡುಗಡೆಯಾಗಿರುವ ಕುರಿತು ಹಾಗೂ ಅರಣ್ಯ ಜಮೀನುಗಳನ್ನು ಡಿ-ನೋಟಿಫಿಕೇಷನ್ ಹಾಗೂ ಕಾಯ್ದಿರಿಸಿರುವ ಬಗ್ಗೆ ಇಲಾಖೆಯಲ್ಲಿ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. |
| ಇ) | ಈ ಅರಣ್ಯ ಜಮೀನುಗಳನ್ನು ಡಿ-ನೋಟಿಫಿಕೇಷನ್ ಹಾಗೂ ಕಾಯ್ದಿರಿಸದಿರುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದಿದೆ? (ಮಾಹಿತಿ ನೀಡುವುದು) | |

ಜಸಂಇ 69 ಎಂಎಲ್ಎ 2025

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ